ದಿನಾಂಕ **01-09-2025** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರವರಿಂದ.**

1. ಆಸ್ತಿ ಖರೀದಿ ಮಾಡುವ ಒಂದು ತಿಂಗಳ ಮುಂಚೆ ಆಸ್ತಿಯನ್ನು ನೋಡಿರುತ್ತೇನೆ. ನಾನು ನೋಡಿದಾಗ ದಾವಾ ಆಸ್ತಿಯಲ್ಲಿ ಯಾರೂ ಇರಲಿಲ್ಲ. ದಾವಾ ಆಸ್ತಿಯಲ್ಲಿ ಒಂದು ಚಿಕ್ಕ ಶೆಡ್ ಇರುತ್ತದೆ. ಅದು ಲಾಕ್ ಆಗಿತ್ತು. ನಾನು ಆಸ್ತಿಯನ್ನು ತೆಗೆದುಕೊಂಡ ನಂತರ ಪತ್ರಾವಳಿ ಕುಟುಂಬದವರು ನಾವು ದಾವಾ ಆಸ್ತಿಯಲ್ಲಿ ಇದ್ದೇವೆ ಎಂದು ಅಲ್ಲಿ ಬಂದರು. ಕಾನೂನು ಬಾಹಿರವಾಗಿ illegal tenants ಎಂದು 5 ಮತ್ತು 6 ನೇ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಇದ್ದಾರೆ ಎಂದು ನಾವು ನೋಟಿಸು ಕೊಟ್ಟಿರುತ್ತೇವೆ. ದಾವಾ ಆಸ್ತಿಯ ಪೂರ್ವಕ್ಕೆ ಎರಡು ಕೋಣೆಯ ಒಂದು ಶೆಡ್ ಇರುತ್ತದೆ ಎಂದರೆ ಸರಿ. ಮೊದಲನೇ ಶೆಡ್ ದಲ್ಲಿ ಪ್ರತಿವಾದಿ ನಂ.2 ರಿಂದ 4 ರವರು ಇರುತ್ತಾರೆ ಎಂದರೆ ಸಾಕ್ಷಿಯು 2 ರಿಂದ 4 ನೇ ಪ್ರತಿವಾದಿಯರು ಎರಡೂ ಶೆಡ್ ದಲ್ಲಿ ಇರುತ್ತಾರೆ ಎಂದು ಹೇಳುತ್ತಾರೆ. ಎರಡು ಶೆಡ್ ಗಳು 12 ಫೂಟ್ ಅಗಲ, 10 ಫೂಟ್ ಉದ್ದ ಇರುತ್ತವೆ ಎಂದರೆ ನಿಖರವಾಗಿ ಗೊತ್ತಿಲ್ಲ. ಈಗ ಶೆಡ್ ಗಳು ಖಾಲಿ ಇರುತ್ತವೆ, ಬೀಗ ಹಾಕಾಲಾಗಿದೆ.

2. ಸದರಿ ಶೆಡ್ ದಲ್ಲಿ ಹನಮಂತ ಮೂಲಿ ಅನ್ನುವವರು ಚಹಾದ ಅಂಗಡಿ ನಡೆಸುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.5 ರವರು ಏನೂ ಉದ್ಯೋಗ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿಯು ಎಷ್ಟು ಜಾಗದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಚಿಕ್ಕ ಶೆಡ್ ದಲ್ಲಿ ಪತ್ರಾವಳಿಯವರು ಇರುತ್ತಾರೆ ಎಂದು ಹೇಳುತ್ತಾರೆ. 5 ನೇ ಪ್ರತಿವಾದಿಯ ಎರಡು ಲೇತ ಮಶೀನ್ ಗಳು ಶೆಡ್ ನಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ಅವರು ಅಲ್ಲಿ ಪ್ಯಾಬ್ರಿಕೇಶನ ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ವಿದ್ಯುತ್ ಶಕ್ತಿ ಸಂಪರ್ಕ 5 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ 5 ನೇ ಪ್ರತಿವಾದಿಯು ವಿದ್ಯುತ

ಸಂಪರ್ಕ ಪಡೆದುಕೊಂಡಿದ್ದಾನೆ ಎಂದು ನಮೂದು ಮಾಡಿದ್ದೇನೆ ಎಂದರೆ ನೆನಪಿಲ್ಲ. ಕೆ ಇ ಬಿ ಕಚೇರಿಯಲ್ಲಿ ನನಗೆ ಹಾಗೂ ಪ್ರತಿವಾದಿ ನಂ.5 ರವರಿಗೆ ತಕರಾರು ಆಗಿತ್ತು ಎಂದರೆ ಸರಿಯಲ್ಲ. ನಾನು ಕೊಟ್ಟಿರುವ ಅರ್ಜಿಯನ್ನು ರದ್ದು ಮಾಡಿ 5 ನೇ ಪ್ರತಿವಾದಿಯ ಹೆಸರನ್ನು ವಿದ್ಯುತ ಸಂಪರ್ಕಕ್ಕೆ ಮುಂದುವರೆಸಿದ್ದಾರೆ ಎಂದರೆ ಸರಿಯಲ್ಲ. ನಾನು ಯಾವತ್ತೂ ವಿದ್ಯುತ್ ಬಿಲ್ ನ್ನು ಕಟ್ಟಿರುವುದಿಲ್ಲ, ಮುನ್ಸಿಪಾಲಿಟಿ ತೆರಿಗೆಯನ್ನು ಇಲ್ಲಿಯವರೆಗೂ ಕಟ್ಟಿರುವುದಿಲ್ಲ.

3. 5 ನೇ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಸುಮಾರು 40 ವರ್ಷಗಳಿಂದ ಇರುತ್ತಾರೆ ಎಂದರೆ ಸರಿಯಲ್ಲ. ನಾನು ನೀಡಿದ ನೋಟಿಸ್ ಗೆ 5 ನೇ ಪ್ರತಿವಾದಿಯು ಪ್ರತ್ಯುತ್ತರ ಕೊಟ್ಟಿರುತ್ತಾರೆ ಎಂದರೆ ಸರಿ. 5 ನೇ ಪ್ರತಿವಾದಿಯು ನನ್ನ ಮೇಲೆ ಓ ಎಸ್ ನಂ.314/2014 ನ್ನು ಇದೇ ನ್ಯಾಯಾಲಯದಲ್ಲಿ ನಿರ್ಬಂಧಕಾಜ್ಞೆಗಾಗಿ ಸಲ್ಲಿಸಿರುತ್ತಾನೆ ಎಂದರೆ ಸರಿ ಆದರೆ ದಾವೆ ನಂಬರ ನೆನಪಿಲ್ಲ. ಸದರಿ ದಾವೆಯು 5 ನೇ ಪ್ರತಿವಾದಿ ಪರ ಡಿಕ್ರಿ ಆಗಿದೆ ಎಂದರೆ ಸರಿಯಲ್ಲ. ಸದರಿ ಡಿಕ್ರಿಯನ್ನು ನಾನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಅದರ ಮೇಲೆ ಮೇಲ್ಮನವಿ ಸಲ್ಲಿಸಿದ ಬಗ್ಗೆ ನನಗೆ ನೆನಪಿಲ್ಲ. ನಾನು ಯಾವುದೇ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

4. 5 ಮತ್ತು 6 ನೇ ಪ್ರತಿವಾದಿಯರು ಯಾವ ರೀತಿಯ ಕಬ್ಜೆಯನ್ನು ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನಾನು ಹೋದಾಗಲೆಲ್ಲ ಸದರಿ ಶೆಡ್ ಗಳಿಗೆ ಬೀಗ ಹಾಕಿರುತ್ತದೆ ಎಂದು ಹೇಳುತ್ತಾರೆ. ಸದರಿ ಶೆಡ್ ಗಳಲ್ಲಿ ಯಾರು ಇರುತ್ತಾರೆ ಹಾಗೂ ಏನು ಕೆಲಸ ಮಾಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಶೆಡ್ ಗಳು ಖಾಲಿ ಇರುತ್ತವೆ ಎಂದು ಹೇಳುತ್ತಾರೆ. 5 ನೇ ಪ್ರತಿವಾದಿಯು illegal possession ದಲ್ಲಿ ಇರುತ್ತಾನೆ. ದಾವಾ ಆಸ್ತಿಯ ಮೂರು ಪಟ್ಟು ಜಾಗದಲ್ಲಿ 5 ನೇ ಪ್ರತಿವಾದಿಯು ಕಬ್ಜೆಯನ್ನು ಹೊಂದಿರುತ್ತಾನೆ ಎಂದರೆ ಸರಿಯಲ್ಲ.

5. ದಾವಾ ಆಸ್ತಿಯ ಖರೀದಿ ಪತ್ರವನ್ನು ರೂ.92,00,000/- ಲಕ್ಷಕ್ಕೆ ಮಾಡಿಕೊಂಡಿರುತ್ತೇನೆ ಎಂದು ಹೇಳುತ್ತಾರೆ. ನಾವು ಕೋರ್ಟ ಫಿ ಯನ್ನು

ರೂ.1,500/– ದಾವಾ ಆಸ್ತಿಯಿಂದ ಬಾಡಿಗೆದಾರರನನ್ನು ಖಾಲಿ ಮಾಡಿಸಲಿಕ್ಕೆ ತುಂಬಿರುತ್ತೇನೆ. 5 ನೇ ಪ್ರತಿವಾದಿಯು ಬಾಡಿಗೆ ದಾರ ಅಲ್ಲ ಎಂದರೆ ಸಾಕ್ಷಿಯು ಪತ್ರಾವಳಿ ಅವರಿಗೆ ಉಪಬಾಡಿಗೆದಾರ ಇರುತ್ತಾನೆ ಎಂದು ಹೇಳುತ್ತಾರೆ. 2 ರಿಂದ 4 ಹಾಗೂ 5 ನೇ ಪ್ರತಿವಾದಿಯ ಮಧ್ಯೆ ನ್ಯಾಯಾಲಯದಲ್ಲಿ ದಾವೆಯಲ್ಲಿ ಬಾಡಿಗೆ ದಾರ ಅಲ್ಲ ಎಂದು ತೀರ್ಮಾನ ಆಗಿದೆ ಎಂದರೆ ಸರಿ.

6. ನಮಗೆ ಖರೀದಿ ಕೊಟ್ಟವರ ಅಣ್ಣ ತಮ್ಮಂದಿರು ಎಷ್ಟು ಎಂದರೆ ಸಾಕ್ಷಿಯು ಒಬ್ಬ ಅಣ್ಣ ಇರುತ್ತಾನೆ ಎಂದು ಹೇಳುತ್ತಾರೆ. ಅವರ ನಡುವೆ ವಿಭಾಗ ಆಗಿದೆ ಎಂದು ತೋರಿಸಲು ದಾಖಲೆಯನ್ನು ಪಡೆದುಕೊಂಡಿದ್ದೇನೆ. ಸದರಿ ವಿಭಾಗದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರ ಬಗ್ಗೆ ನೆನಪಿಲ್ಲ. ಸದರಿ ವಿಭಾಗವು ನ್ಯಾಯಾಲಯದಲ್ಲಿ ಆಗಿದೆಯಾ ಅಥವಾ ನೊಂದಣಿ ಕಚೇರಿಯಲ್ಲಿ ಆಗಿದೆಯಾ ಎಂದರೆ ಸಾಕ್ಷಿಯು ಕುಟುಂಬದಲ್ಲಿ ವಿಭಾಗ ಆಗಿದೆ ಎಂದು ಹೇಳುತ್ತಾರೆ. ಅವರ ಮಧ್ಯೆ ಪಾಲು ವಾಟ್ನಿ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾಧೀಶರು
ಮತ್ತು ಪ್ರಧಾನ ಜೆ.ಎಂ.ಎಫ್.ಸಿ. ಧಾರವಾಡ.

**ಪಿಡಬ್ಲ್ಯು – 1**

**ಪಿಡಬ್ಲ್ಯು – 1**

**ಪಿಡಬ್ಲ್ಯು – 1**